# ಮೈಸೂರಿನ ಒಡೆಯರು
# ಸಾ.ಶ.ವ. 1399-1947 ರವರೆಗೆ.

ಒಂದು ಸಂಕ್ಷಿಪ್ತ ಪರಿಚಯ

# ಓದಿಕೊಳ್ಳಿ

- ಸುಮಾರು 550 ವರ್ಷಗಳ ಕಾಲ ಒಟ್ಟು 25 ಮಹಾರಾಜರು ಮೈಸೂರು ಸಂಸ್ಥಾನವನ್ನು ಆಳಿದ್ದಾರೆ.
- ಮೈಸೂರು ರಾಜರ ಆಡಳಿತವು 1399 ರಿಂದ ಆರಂಭವಾಗುತ್ತದೆಯಲ್ಲದೆ, ಯದುರಾಯರನ್ನು  ಈ ವಂಶದ ಸ್ಥಾಪಕರೆಂದು ಹೇಳಲಾಗುತ್ತೆದೆ.

# ಯದುರಾಯರ ಮೂಲ ಯಾವುದು?

- ಉತ್ತರದ ದ್ವಾರಕಾಪಟ್ಟಣದ ರಾಜದೇವನ ಮಗನೇ ಯದುರಾಯ.
- ಅವರು ತನ್ನ ಸಹೋದರ ಕೃಷ್ಣರಾಯರೊಂದಿಗೆ ಚೆಲುವನಾರಾಯಣಸ್ವಾಮಿಯ ದರ್ಶನ ಮಾಡುವ ಸಲುವಾಗಿ ಮೇಲುಕೋಟೆಗೆ ಬರುತ್ತಾರೆ.
- ಅಲ್ಲಿಂದ ಹಿಂತಿರುಗಿ ಕಾವೇರಿ ನದಿ ದಾಟಿ ಮೈಸೂರನ್ನು ಸೇರುತ್ತಾರೆ.

# ಪಾಳೆಗಾರನ ಕೊಂದು ಯದುವಂಶ ಸ್ಥಾಪನೆ

- ಅದೇ ವೇಳೆಯಲ್ಲಿ ಮೈಸೂರನ್ನು ಆಳುತ್ತಿದ್ದ ಪಾಳೇಗಾರ ಚಾಮರಾಜ ತೀರಿಕೊಂಡಿದ್ದರಿಂದ ಅವರ ಹೆಂಡತಿ ಹಾಗೂ ಸುಂದರ ಮಗಳಿಗೆ ಮೈಸೂರು ಸೀಮೆಯ ದಳವಾಯಿಯಾಗಿದ್ದ ಕೊರಗಳ್ಳಿ ಮಾರನಾಯಕ ಹಿಂಸೆ ನೀಡುತ್ತಿದ್ದುದಲ್ಲದೆ ಪುತ್ರಿ ದೇವಾಜಮ್ಮಣಿಯನ್ನು ತನಗೆ ವಿವಾಹ ಮಾಡಿಕೊಡುವಂತೆ ಪೀಡಿಸುತ್ತಿದ್ದನು.
- ಇದನ್ನು ತಿಳಿದ ಯದುರಾಯರು ಮಹಾರಾಣಿಯ ಸಹಾಯಕ್ಕೆ ಬರುವುದರೊಂದಿಗೆ ಮಾರನಾಯಕನನ್ನು ಕೊಲ್ಲುತ್ತಾರೆ.

# ಮುಂದೇನಾಯಿತು?

- **ಮಹಾರಾಣಿ ತನ್ನ ಪುತ್ರಿ ದೇವಾಜಮ್ಮಣಿಯನ್ನು ಯದುರಾಯರಿಗೆ ಕೊಟ್ಟು ಮದುವೆ ಮಾಡುತ್ತಾರೆ.**
- **ಹೀಗೆ ಮೈಸೂರಿನಲ್ಲಿ ಸ.ಶ.ವ 1400, ಎಪ್ರಿಲ್ 29 ರಂದು ಯದುವಂಶದ ಆಡಳಿತ ಶುರುವಾಯಿತು ಎಂಬುದು ಇತಿಹಾಸ.**

# ಯದುರಾಯರ ಬಳಿಕ ಆಡಳಿತ ಮುಂದುವರಿಕೆ

- ಯದುರಾಯರ ಬಳಿಕ **1423** ರಿಂದ **1459** ರವರೆಗೆ ಒಂದನೇ ಹಿರಿಯ ಬೆಟ್ಟದ ಚಾಮರಾಜ ಒಡೆಯರ್
- **1459** ರಿಂದ **1478** ರವರೆಗೆ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಪುತ್ರ ತಿಮ್ಮರಾಜ ಒಡೆಯರ್
- **1478** ರಿಂದ **1513** ರವರೆಗೆ ಎರಡನೇ ಹಿರಿಯ ಚಾಮರಾಜ ಒಡೆಯರ್
- **1513** ರಿಂದ **1553** ರವರೆಗೆ ಮೂರನೇ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಆಡಳಿತ ನಡೆಸಿದರು.

# ಗಮನವಿಟ್ಟು ಓದಿಕೊಳ್ಳಿರಿ

- **1553 ರಿಂದ 1572 ರವರೆಗೆ ಎರಡನೆಯ ತಿಮ್ಮರಾಜ ಒಡೆಯರ್**
- **1572 ರಿಂದ 1576 ರವರೆಗೆ ನಾಲ್ಕನೇ ಬೋಳಚಾಮರಾಜ ಒಡೆಯರ್**
- **ಐದನೇ ಬೆಟ್ಟದ ಚಾಮರಾಜ ಒಡೆಯರ್ 1576 ರಿಂದ 1578 ರವರೆಗೆ ಕೇವಲ ಎರಡು ವರ್ಷಗಳ ಕಾಲ ಆಡಳಿತ ನಡೆಸಿದರಲ್ಲದೆ, ವೈರಾಗ್ಯ ತಾಳಿದ ಅವರು ಆಡಳಿತವನ್ನು ತನ್ನ ಸಹೋದರರರಿಗೆ ವಹಿಸಿಕೊಟ್ಟರು.**

# ಒಂದನೇ ರಾಜ ಒಡೆಯರ್  - ದಸರಾ ಆಚರಣೆ ಆರಂಭ

- ಸಾ.ಶ.ವ. 1578 ರಿಂದ 1617 ರವರೆಗೆ ಆಡಳಿತ.
- ಬೋಳ ಚಾಮರಾಜ ಒಡೆಯರ ಎರಡನೇ ಪುತ್ರ.
- ಜನನ: ಸ.ಶ.ವ 1552. 1578 ರಲ್ಲಿ ಪಟ್ಟಾಭಿಷೇಕ.
- ವಿಜಯನಗರಕ್ಕೆ ನೀಡುತ್ತಿದ್ದ ಕಪ್ಪ ನಿಲ್ಲಿಸಿ ಸ್ವತಂತ್ರ ಘೋಷಣೆ.
- ಇವರ ಕಾಲದಲ್ಲಿ 1610 ರಲ್ಲಿ ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲಾಯಿತಲ್ಲದೆ, ದಸರಾ ಆಚರಣೆಯೂ ಜಾರಿಗೆ ಬಂದಿತು.
- ಸ.ಶ.ವ 1595-1617 ರ ನಡುವೆ ಅಕ್ಕಿಹೆಬ್ಬಾಳು, ರಂಗಸಮುದ್ರ, ಅರಕೆರೆ, ಸೋಸಲೆ, ಬನ್ನೂರು, ಕನ್ನಂಬಾಡಿ, ಯಳಂದೂರು, ಸತ್ತೇಗಾಲ, ನರಸೀಪುರ, ತಲಕಾಡು, ತೆರಕಣಾಂಬಿ, ತಲಕಾಡು, ಕಳಸ, ಹೆಗ್ಗಡದೇವನಕೋಟೆ, ಬಿಳಿಕೆರೆ, ಮೂಗುರು, ಉಮ್ಮತ್ತೂರುಗಳನ್ನು ಗೆದ್ದು ತನ್ನ ರಾಜ್ಯದಲ್ಲಿ ವಿಲೀನ.

# ಗಮನವಿಟ್ಟು ಓದಿಕೊಳ್ಳಿರಿ

- ವಿಜಯನಗರದ ಪ್ರತಿನಿಧಿ ಶ್ರೀರಂಗರಾಯ ದುರ್ಬಲ: ಶ್ರೀರಂಗಪಟ್ಟಣವನ್ನು ರಾಜಾ ಒಡೆಯರಿಗೆ ವಹಿಸಿ, ಮಾಲಂಗಿಯಲ್ಲಿ ಮರಣ.
- ಶ್ರೀರಂಗರಾಯನ ಪತ್ನಿ ರಂಗಮ್ಮಳ ಆಭರಣಗಳನ್ನು ಕಿತ್ತುಕೊಳ್ಳುವ ಪ್ರಯತ್ನ ರಾಜಾ ಒಡೆಯರಿಂದ.
- ಕೋಪಗೊಂಡ ರಂಗಮ್ಮ "ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರಿನ ಒಡೆಯರಿಗೆ ಮಕ್ಕಳಿಲ್ಲವಾಗಲಿ" ಎಂಬ ಶಾಪ ನೀಡಿದಳು.
- ಈತನ ಪ್ರಧಾನಮಂತ್ರಿ ಯಾಗಿದ್ದ 'ತಿರುಮಲಾರ್ಯ'ನೆಂಬ ಶ್ರೀವೈಷ್ಣವ ಕವಿ "ಕರ್ಣವೃತ್ತಾಂತಕಥೆ "ಎಂಬ ಸಾಂಗತ್ಯಕಾವ್ಯವನ್ನು ರಚಿಸಿದ್ದಾನೆ.
- ಇದು ಅಪೂರ್ವವಾದ ಕಾವ್ಯ. ಈಗ ದೊರೆತಿರುವ ಗ್ರಂಥದಲ್ಲಿ ಹನ್ನೊಂದು ಸಂಧಿಗಳೂ ಹನ್ನೆರಡನೆಯದರಲ್ಲಿ ಕೆಲವು ಪದ್ಯಗಳೂ ಇವೆ. ಮಹಾಭಾರತದ ಶಾಂತಿಪರ್ವದಲ್ಲಿ ಬಂದಿರುವ ಕರ್ಣನ ಚರಿತ್ರೆಯೇ ಈ ಗ್ರಂಥದ ವಸ್ತು.

# ಆರನೇ ಚಾಮರಾಜ ಒಡೆಯರ್ - 1617 - 1637

- ರಾಜಾ ಒಡೆಯರ ಮೊಮ್ಮೊಗ. 14ನೆ ವಯಸ್ಸಿಗೆ ಪಟ್ಟಕ್ಕೆ.
- ದಳವಾಯಿ ಬೆಟ್ಟದರಸ ರಾಜಪ್ರತಿನಿಧಿ; ಅಧಿಕಾರ ಅಪಹರಣಕ್ಕೆ ಯತ್ನ.
- ಕಣ್ಣು ಕೀಳಿಸಿ, ಸೆರೆವಾಸದ  ಶಿಕ್ಷೆ.
- ಆಯುಧಾಗಾರ ನಿರ್ಮಾಣ;
- ಇವರ ಕಾಲದಲ್ಲಿ ಮೈಸೂರು ರಾಜ್ಯ ಇನ್ನಷ್ಟು ವಿಸ್ತಾರ

# ಸಾಹಿತ್ಯ ಪೋಷಣೆ

- ಆರನೆ ಚಾಮರಾಜ ಒಡೆಯ ಚಾಮರಾಜೋಕ್ತಿವಿಲಾಸ" ಎಂಬ ಹೆಸರಿನಲ್ಲಿ ವಾಲ್ಮೀಕಿ ರಾಮಾಯಣವನ್ನು ಸರಳಗನ್ನಡ ಗದ್ಯಕಾವ್ಯವಾಗಿ ಬರೆದಿದ್ದಾನೆ.
- ಇದು ಮೂಲ ಗ್ರಂಥಕ್ಕೆ ಅನುಸಾರವಾದ ಗದ್ಯಾನುವಾದ. ಈ ಗ್ರಂಥವನ್ನು ಲೋಕೋಪಕಾರಕ್ಕಾಗಿ ಧೀಮಂತ ವಿದ್ವಾಂಸನಾದ ವಿರೂಪಾಕ್ಷನಿಂದ ಅರಸ ಬರೆಯಿಸಿದನೆಂಬ ಅರ್ಥಬರುವ ಒಂದು ಸಂಸ್ಕೃತ ಶ್ಲೋಕ ಗ್ರಂಥದ ಆರಂಭದಲ್ಲಿಯೇ ಬಂದಿದೆ.
- ಆದ್ದರಿಂದ ಇದು ಅರಸನ ಹೆಸರಿನಲ್ಲಿ ಅವನ ಆಶ್ರಿತನಾದ ವಿದ್ವಾಂಸನೊಬ್ಬ ಬರೆದದ್ದಾಗಿರಬಹುದೆಂದು ತೋರುತ್ತದೆ.
- ಚಾಮರಾಜ ಮಗೆಪ್ರಕಾಶವೆಂಬ ಇನ್ನೊಂದು ಗ್ರಂಥವನ್ನೂ ರಚಿಸಿರುವನೆಂಬ ಪ್ರತೀತಿ ಇದೆ.
- ರಾಮಚಂದ್ರನೆಂಬ ವಿದ್ವಾಂಸ ಒಂದು "ಅಶ್ವಶಾಸ್ತ್ರ"ವನ್ನು ರಚಿಸಿದ್ದಾನೆ. ಶಾಲಿಹೋತ್ರಕೃತವಾದ ಸಂಸ್ಕೃತ ಗ್ರಂಥವನ್ನು ಕನ್ನಡಿಸಿ ಬರೆದ ಅನುವಾದವಿದು.
- ಪದ್ಮಣಪಂಡಿತ "ಹಯಸಾರಸಮುಚ್ಚಯ" ಎಂಬ ಪದ್ಯಗ್ರಂಥವನ್ನು ರಚಿಸಿದ್ದಾನೆ.

# ಇಮ್ಮಡಿ ರಾಜ ಒಡೆಯರ್ – 1637-38

- ಮಲೆವರಗಂಡ, ಸಂಗೀತಲೋಲ, ವೀರ ಶೂರ, ಸಾಹಿತ್ಯ ರತ್ನಾಕರ, ಅಭಯ ಪ್ರತಾಪಾಧೀಶ್ವರ ಮುಂತಾದ ಬಿರುದುಗಳಿದ್ದವು.
- ದಳವಾಯಿ ವಿಕ್ರಮರಾಯನಿಂದ ಕೊಲೆಯಾದರು.

# ರಣಧೀರ ಕಂಠೀರವ ನರಸರಾಜ ಒಡೆಯರ್
# 1638 - 1659

- ಮೈಸೂರು ಒಡೆಯರ ಸಂತತಿಯ ಹೆಸರಾಂತ ರಾಜರಲ್ಲಿ ಒಬ್ಬ. ಬೆಟ್ಟದ ಚಾಮರಾಜ ಒಡೆಯನ ಮಗ. ಬೋಳ ಚಾಮರಾಜನ ಅನಂತರ ಬೆಟ್ಟದ ಚಾಮರಾಜನೇ ಸಿಂಹಾಸನಕ್ಕೆ ಬಂದಿದ್ದರೂ ಆಡಳಿತ ಸಾಮರ್ಥ್ಯದ ಅಭಾವದಿಂದಾಗಿ ತನ್ನ ತಮ್ಮನಾದ ರಾಜ ಒಡೆಯನಿಗೆ ಅಧಿಕಾರ ಬಿಟ್ಟುಕೊಟ್ಟಿದ್ದ. ಅವನ ಅನಂತರ ಸಿಂಹಾಸನವನ್ನೇರಿದ ಇಮ್ಮಡಿ ರಾಜ ಒಡೆಯ ವಿಷಪ್ರಾಶನದಿಂದ ಕೊಲೆಗೀಡಾದಾಗ ಪಟ್ಟಕ್ಕೆ ಬಂದವನೇ ಒಂದನೆಯ ಕಂಠೀರವ ನರಸರಾಜ.

# ಆರಂಭಿಕ ಅಪಾಯದ ನಿವಾರಣೆ

- ಈತನೂ ಇವನ ತಂದೆಯಂತೆಯೇ ಅಸಮರ್ಥನೆಂದೂ ಇದರಿಂದ ತನ್ನ ಹಾದಿ ಸುಗಮವಾದೀತೆಂದೂ ಇಮ್ಮಡಿ ರಾಜ ಒಡೆಯನನ್ನು ಕೊಲೆ ಮಾಡಿಸಿದ ದಳವಾಯಿ ವಿಕ್ರಮರಾಯನ ಭಾವನೆಯಾಗಿತ್ತು. ಆದರೆ ಈ ನಿರೀಕ್ಷೆ ಸುಳ್ಳಾಯಿತು. ಕಂಠೀರವ ನರಸರಾಜ ಅಜ್ಞಾತನಾಗಿದ್ದಾಗಲೇ ತನ್ನ ಪರಾಕ್ರಮವನ್ನು ಮೆರೆದಿದ್ದ. ತಿರುಚಿನಾಪಳ್ಳಿಯ ಜಟ್ಟಿಯೊಂದಿಗೆ ಕಾದಾಡಿ ಅವನನ್ನು ಸೋಲಿಸಿ ಕೊಂದು ಅಲ್ಲಿಯ ರಾಜನ ಯಾವ ಮರ್ಯಾದೆಯನ್ನೂ ಸ್ವೀಕರಿಸದೆ ಗುಟ್ಟಾಗಿ ಹಿಂತಿರುಗಿದ್ದನೆಂಬುದಾಗಿ ಖ್ಯಾತಿ ಗಳಿಸಿದ್ದ. ಈತ ಸಿಂಹಾಸನವನ್ನೇರಿದ ಕೂಡಲೇ ದಳವಾಯಿ ವಿಕ್ರಮರಾಯನನ್ನು ಕೊಲ್ಲಿಸಿ ಪುರ್ಣ ಅಧಿಕಾರವಹಿಸಿಕೊಂಡ.

# ರಣದುಲ್ಲಾಖಾನನನ್ನು ಸೋಲಿಸಿದ್ದು

- ಆ ವೇಳೆಗೆ ವಿಜಯನಗರದ ಅಧಿಕಾರ ಕ್ಷೀಣಿಸಿ, ಬಿಜಾಪುರದ ಸುಲ್ತಾನನೂ ಮೊಗಲರೂ ಕನ್ನಡನಾಡಿನ ಮೇಲೆ ತಮ್ಮ ಅಧಿಕಾರ ಸ್ಥಾಪಿಸುವ ಹವಣಿಕೆಯಲ್ಲಿದ್ದರು. ಬಿಜಾಪುರದ ಸುಲ್ತಾನ ಪ್ರಸಿದ್ಧ ದಳಪತಿಯಾದ ರಣದುಲ್ಲಾಖಾನನ ನೇತೃತ್ವದಲ್ಲಿ ಶ್ರೀರಂಗಪಟ್ಟಣವನ್ನು ಮುತ್ತಲು ಒಂದು ಸೈನ್ಯವನ್ನು ಕಳುಹಿಸಿದ. ಕಂಠೀರವ ನರಸರಾಜ ಒಡೆಯ ಪರಾಕ್ರಮದಿಂದ ಹೋರಾಡಿ ಅವನನ್ನು ಸೋಲಿಸಿ ಹಿಂತಿರುಗುವಂತೆ ಮಾಡಿದ.

# ರಾಜ್ಯ ವಿಸ್ತರಣೆ

- ಅನಂತರ ಈತ ದಕ್ಷಿಣದ ಜಿಲ್ಲೆಗಳ ಮೇಲೆ ದಂಡೆತ್ತಿಹೋಗಿ ಮಧುರೆಯ ನಾಯಕನನ್ನು ಸೋಲಿಸಿ ಸತ್ಯಮಂಗಲವನ್ನೂ ಡಣ್ಣಾಯಕನ ಕೋಟೆಯನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಪೆರಿಯಪಟ್ಟಣ ಮತ್ತು ಇಕ್ಕೇರಿಯ ಪಾಳೆಯಗಾರರೂ ಇವನಿಗೆ ಸೋತರು. ನರಸರಾಜನ ರಾಜ್ಯ ಕೊಡಗಿನ ಗಡಿ ಮತ್ತು ಹಾಸನ ಜಿಲ್ಲೆಗಳವರೆಗೂ ವಿಸ್ತಾರವಾಯಿತು. ನಂತರ ನಾಗಮಂಗಲದಲ್ಲಿ ಅಧಿಕಾರ ನಡೆಸುತ್ತಿದ್ದ ದೊಡ್ಡಯ್ಯ ಇವನ ವಿರುದ್ಧವಾಗಿ ಒಳಗೊಳಗೆ ಪಿತೂರಿ ನಡೆಸುತ್ತಿದ್ದನೆಂಬುದು ಗೊತ್ತಾಗಿ ಅವನನ್ನು ಶಿಕ್ಷಿಸಿದ. ಮಾಗಡಿ ಕೆಂಪೇಗೌಡನನ್ನು ಯಲಹಂಕದ ಬಳಿ ಸೋಲಿಸಿ ಅವನಿಂದಲೂ ಕಪ್ಪ ವಸೂಲು ಮಾಡಿದ.

# ಸ್ವತಂತ್ರ ಆಡಳಿತಗಾರನಾದುದು ಹೇಗೆ?

- ವಿಜಯನಗರದ ಶ್ರೀರಂಗರಾಯನಿಗೆ ಬೇಲೂರಿನಲ್ಲಿ ನರಸರಾಜನ ಆಶ್ರಯ ದೊರಕಿತು. ವಿಜಯನಗರದ ನಾಮಮಾತ್ರ ಸಾರ್ವಭೌಮತ್ವ ಸಂಪುರ್ಣ ನಶಿಸಿಹೋಗುವ ಸ್ಥಿತಿಯಲ್ಲಿದ್ದುದನ್ನು ಮನಗಂಡ ಕಂಠೀರವ ನರಸರಾಜ ಆ ಸಮಯಕ್ಕೆ ಸರಿಯಾಗಿ ತಾನು ಸ್ವಾತಂತ್ರ್ಯವನ್ನು ಘೋಷಿಸಿಕೊಂಡ.
- ಇದರ ಸಂಕೇತವಾಗಿ ಶ್ರೀರಂಗಪಟ್ಟಣದಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದನಲ್ಲದೆ ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದ. ಇವಕ್ಕೆ ಕಂಠೀರಾಯಹಣ ಎಂದು ಹೆಸರು. ಕಂಠೀರಾಯ ಎಂಬ ಕನ್ನಡ ಅಕ್ಷರಗಳು ನಾಣ್ಯಗಳ ಮೇಲಿವೆ. ಈ ನಾಣ್ಯಗಳು ಹೈದರ್ ಮತ್ತು ಟಿಪ್ಪು ಅಧಿಕಾರಕ್ಕೆ ಬರುವವರೆಗೂ ಚಲಾವಣೆಯಲ್ಲಿದ್ದುವು.

## ದಕ್ಷ ಆಡಳಿತಗಾರ!

- ಜನರಿಗೆ ಕಿರುಕುಳ ಕೊಡುತ್ತಿದ್ದ ಶ್ರೀಮಂತರನ್ನೂ ದುಷ್ಟರನ್ನೂ ಈತ ಸೂಕ್ತರೀತಿಯಲ್ಲಿ ಶಿಕ್ಷಿಸಿದ. ಆಡಳಿತ ಸುಧಾರಣೆ ಮಾಡಿ, ತೆರಿಗೆ ವಸೂಲಿಯನ್ನು ಬಿಗಿಗೊಳಿಸಿದ್ದರಿಂದ ಬೊಕ್ಕಸಕ್ಕೆ ಹೆಚ್ಚು ಹಣ ಬಂತು. ಇದರಿಂದ ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಲಾಯಿತು. ಅಲ್ಲಿ ನರಸಿಂಹ ದೇವಾಲಯವನ್ನು ಕಟ್ಟಿಸಿದವನೀತನೇ. ಈ ದೇವಾಲಯದಲ್ಲಿ ಕಂಠೀರವ ನರಸರಾಜನ ಪ್ರತಿಮೆಯನ್ನು ಕಡೆದು ನಿಲ್ಲಿಸಲಾಗಿದೆ. ಲಕ್ಷ್ಮೀನರಸಿಂಹದೇವರ ಪ್ರೀತ್ಯರ್ಥವಾಗಿ ಏಕಾದಶಿ ವ್ರತ ವಿಜೃಂಭಣೆಯಿಂದ ನಡೆಯುವಂತೆ ಈತ ಏರ್ಪಾಡು ಮಾಡಿದನೆಂದು ಪ್ರತೀತಿಯಿದೆ. ಈತ ಅನೇಕ ಅಗ್ರಹಾರಗಳನ್ನು ಕಟ್ಟಿಸಿ ದಾನದತ್ತಿಗಳನ್ನು ಕೊಟ್ಟ. ಆರನೆಯ ಚಾಮರಾಜ ಒಡೆಯರಿಗೆ ಬಂಗಾರದೊಡ್ಡಿ ಎಂಬ ಮೆಚ್ಚಿನ ಪ್ರೇಯಸಿಯಿದ್ದಳೆಂದೂ ಅವಳ ಜ್ಞಾಪಕಾರ್ಥವಾಗಿ ಕಂಠೀರವ ನರಸರಾಜ ಶ್ರೀರಂಗಪಟ್ಟಣದ ಬಳಿಯ ಬಂಗಾರದೊಡ್ಡಿ ನಾಲೆಯನ್ನು ನಿರ್ಮಿಸಿದನೆಂದೂ ಹೇಳುತ್ತಾರೆ.

# ದಳವಾಯಿಗಳ ನಿಯಂತ್ರಣ ಮಾಡಿದುದು ಹೇಗೆ?

- ದಳವಾಯಿಗಳು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳದಂತೆ ಈತ ಸೂಕ್ತಕ್ರಮ ಕೈಗೊಂಡನಲ್ಲದೆ, ಯಾವೊಬ್ಬ ದಳವಾಯಿಯೂ ಹೆಚ್ಚು ವರ್ಷಗಳ ಕಾಲ ಅಧಿಕಾರದಲ್ಲಿ ಮುಂದುವರಿಯದಂತೆ ಎಚ್ಚರಿಕೆ ವಹಿಸಿದ. ಇವನ 20 ವರ್ಷಗಳ ಆಳ್ವಿಕೆಯ ಕಾಲದಲ್ಲಿ ಸು. 10 ಜನ ದಳವಾಯಿಗಳು ಅಧಿಕಾರದಲ್ಲಿದ್ದು ಹೋದರು.

# ಸಾಹಿತ್ಯ ಪೋಷಕ

- ಕಂಠೀರವ ನರಸರಾಜ ವಿದ್ವಾಂಸರಿಗೂ ಕವಿಗಳಿಗೂ ಪ್ರೋತ್ಸಾಹ ನೀಡುತ್ತಿದ್ದ,
- ಭಾಸ್ಕರ ವಿರಚಿತ ಬೇಹಾರ ಗಣಿತ, ತಿಮ್ಮರಸಕವಿಯ ಮಾರ್ಕಂಡೇಯ ರಾಮಾಯಣ, ಗೋವಿಂದ ವೈದ್ಯನ ನರಸರಾಜವಿಜಯ-ಇವು ಈತನ ಕಾಲದಲ್ಲಿ ರಚಿತವಾದ ಕೆಲವು ಗ್ರಂಥಗಳು. ನರಸರಾಜವಿಜಯ ಆಗಿನ ಇತಿಹಾಸಕ್ಕೆ ಒಂದು ಆಕರ ಗ್ರಂಥ. ಅನೇಕ ಶಾಸನಗಳಲ್ಲಿ ಕಂಠೀರವ ನರಸರಾಜನ ಸಾಹಸ ಪರಾಕ್ರಮಗಳ ವರ್ಣನೆಯುಂಟು. ಈತ ರಣಧೀರ ಕಂಠೀರವ ಎಂದೂ ಪ್ರಸಿದ್ಧನಾಗಿದ್ದಾನೆ. ಕಂಠೀರವ ನರಸರಾಜ 1659ರಲ್ಲಿ ಕಾಲವಾದ. ಇವನಿಗೆ ಮಕ್ಕಳಿರಲಿಲ್ಲ.

# ದೊಡ್ಡ ದೇವರಾಜ ಒಡೆಯರ್: 1659 - 1672

- ಪರಾಕ್ರಮಿಯಾಗಿದ್ದು, ರಾಜಕುಲತಿಲಕ, ರಾಜಮಾರ್ತಾಂಡ, ರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದು ಪಡೆದುಕೊಂಡರು
- **1672** ರಿಂದ **1704** ರವರೆಗೆ ರಾಜ್ಯಭಾರ ಮಾಡಿದ ಚಿಕ್ಕದೇವರಾಜ ಒಡೆಯರ್ ಪಂಡಿತರೂ, ಮಹಾಪರಾಕ್ರಮಿಯೂ ಆಗಿದ್ದರು
- ಇವರು ಶಿವಾಜಿ ಮತ್ತು ಔರಂಗಜೇಬನ ಸಮಕಾಲೀನರಾಗಿದ್ದರು. ರಾಜ್ಯಭಾರ ವಹಿಸಿಕೊಂಡ ಐದು ದಿನದಲ್ಲಿ ದಂಡೆತ್ತಿ ಬಂದ ಮಧುರೆಯ ಚೊಕ್ಕನಾಯಕನೆಂಬ ಪಾಳೇಗಾರನನ್ನು ಎದುರಿಸಿ ಜಯಪಡೆದರಲ್ಲದೆ, ಸತ್ಯಮಂಗಲ ಮತ್ತು ಧರ್ಮಪುರಂ ಎಂಬ ಎರಡು ಚಿಕ್ಕ ರಾಜ್ಯವನ್ನು ತಮ್ಮ ವಶ ಮಾಡಿಕೊಂಡರು.

# ಕಪ್ಪಕಾಣಿಕೆ ಸಲ್ಲಿಸಿ ಸಂಧಾನ

- ಚಿಕ್ಕದೇವರಾಜ ಒಡೆಯರ್ ಪುತ್ರರಾದ ಕಂಠೀರವ ಮಹಾರಾಜ ಒಡೆಯರ್ 1704 ರಿಂದ 1713 ರವರೆಗೆ ಆಡಳಿತ ನಡೆಸಿದರು. ಇವರ ಕಾಲದಲ್ಲಿ ಔರಂಗಜೇಬನ ಆಡಳಿತದಲ್ಲಿದ್ದ ದಕ್ಷಿಣ ಭಾರತದ ಗೌರ್ನರ್ ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದಿದ್ದರು. ಈ ಸಂದರ್ಭ ಕಂಠೀರವ ಮಹಾರಾಜ ಒಡೆಯರ್ ಒಂದೂವರೆ ಕೋಟಿ ರೂ.ಗಳ ಕಪ್ಪಕಾಣಿಕೆ ಸಲ್ಲಿಸಿ ಸಂಧಾನ ಮಾಡಿಕೊಂಡರು
- ಇವರ ಪುತ್ರ ದೊಡ್ಡ ಕೃಷ್ಣರಾಜ ಒಡೆಯರ್ ಕೇವಲ ಹನ್ನೆರಡು ವರ್ಷಕ್ಕೆ ಪಟ್ಟಕ್ಕೇರಿದರು. 1714 ರಿಂದ 1732 ರವರೆಗೆ ಆಡಳಿತ ನಡೆಸಿದರು. ಇವರ ಕಾಲದಲ್ಲಿ ನಿಜಾಂ, ಆರ್ಕಾಟ್ ನವಾಬ್, ಸಿರಾ, ಕಡಪ, ಕರ್ನೂಲ್, ಸವಾನೂರ್ ಮತ್ತು ಇಕ್ಕೇರಿ ರಾಜರು ಒಟ್ಟಾಗಿ ಯುದ್ಧಕ್ಕೆ ಬಂದಿದ್ದರಿಂದ ಒಂದು ಕೋಟಿ ಕಾಣಿಕೆ ನೀಡಿ ಸಂಧಾನ ಮಾಡಿಕೊಳ್ಳಲಾಯಿತು.

# ಫ್ರೆಂಚರ ಸಹಾಯ ಪಡೆದ ರಾಜರು

- ದೊಡ್ಡ ಕೃಷ್ಣರಾಜ ಒಡೆಯರ್ ಮಕ್ಕಳಿಲ್ಲದ ಕಾರಣ ಚಾಮರಾಜ ಒಡೆಯರ್ ಅವರನ್ನು ದತ್ತು ತೆಗೆದುಕೊಂಡರು
- ಚಾಮರಾಜ ಒಡೆಯರ್ 1732 ರಿಂದ 1734 ರವರೆಗೆ ರಾಜ್ಯವಾಳಿದರು.
- ಅವರ ಬಳಿಕ ಎರಡನೇ ಇಮ್ಮಡಿ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದು 1734 ರಿಂದ 1766 ರವರೆಗೆ ರಾಜ್ಯಭಾರ ನಡೆಸಿದರು
- ಇವರ ಕಾಲದಲ್ಲಿ ಶತ್ರುಗಳ ಸೈನ್ಯ ಆಗಾಗ್ಗೆ ಯುದ್ಧ ಸಾರುತ್ತಿದ್ದುದನ್ನು ಗಮನಿಸಿ ಫ್ರೆಂಚರ ಸಹಾಯ ಪಡೆದು ಮೈಸೂರಿನ ಗಡಿಯನ್ನು ಭದ್ರಪಡಿಸಿಕೊಂಡರು.
- ಇಮ್ಮಡಿ ಕೃಷ್ಣರಾಜ ಒಡೆಯರ್ ನಂತರ ನವಾಬ್ ಹೈದರಾಲಿ ಖಾನರ ಸಲಹೆ ಮೇರೆಗೆ ಚಲುವಾಜಮ್ಮಣ್ಣಿ ಅವರು ನಂಜರಾಜ ಒಡೆಯರ್‌ಗೆ ಪಟ್ಟ ಕಟ್ಟಿದರು
- ಅವರು 1766 ರಿಂದ 1770 ರವರೆಗೆ ರಾಜಭಾರ ನಡೆಸಿದರು.

# ಮೈಸೂರಿಗೆ ರಾಜಧಾನಿ ವರ್ಗಾವಣೆ

- **1770** ರಿಂದ **1776** ರವರೆಗೆ ಎಂಟನೇ ಬೆಟ್ಟದ ಚಾಮರಾಜ ಒಡೆಯರ್ ಆಡಳಿ ನಡೆಸಿದರಾದರೂ ಹೈದರಾಲಿಯೇ ಸರ್ವಾಧಿಕಾರಿಯಾಗಿದ್ದನು.
- **1776** ರಿಂದ **1796** ರವರೆಗೆ ಒಂಬತ್ತನೇ ಖಾಸಾ ಚಾಮರಾಜ ಒಡೆಯರ್ ಆಡಳಿತ ನಡೆಸಿದರು.
- ಇವರ ಕಾಲದಲ್ಲಿ ಬಹಳಷ್ಟು ಐತಿಹಾಸಿಕ ಘಟನೆಗಳು ನಡೆದವು. ಟಿಪ್ಪು ಸುಲ್ತಾನ್ ರಾಜ ಕುಟುಂಬವನ್ನು ಅರಮನೆಯಿಂದ ಸ್ಥಳಾಂತರಿಸಿದನು.
- ಆಂಗ್ಲರೊಡನೆ ನಡೆದ ಯುದ್ಧದಲ್ಲಿ ಟಿಪ್ಪು ಮೃತಪಟ್ಟ ಬಳಿಕ ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಲಾಯಿತು.

# ಕೊನೆಯಾದ ರಾಜ ಆಡಳಿತ

- ಮುಮ್ಮಡಿ ಕೃಷ್ಣರಾಜ ಒಡೆಯರ್ 1799 ರಿಂದ 1831 ರವರೆಗೆ ಆಡಳಿತ ನಡೆಸಿದರು.
- 1831-1881 ರವರೆಗೆ ಮೈಸೂರಿನಲ್ಲಿ ------- ಆಡಳಿತ ಏರ್ಪಟ್ಟಿತ್ತು.
- 1881 ರಿಂದ 1894 ರವರೆಗೆ ರಾಜ್ಯವಾಳಿದ 10ನೆ ಚಾಮರಾಜೇಂದ್ರ ಒಡೆಯರ್ ಅವರು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ದತ್ತುಪುತ್ರರಾಗಿದ್ದು, 18ನೇ ವಯಸ್ಸಲ್ಲೇ ರಾಜ್ಯಭಾರವನ್ನು ವಹಿಸಿಕೊಂಡಿದ್ದರು.
- 1888 ರಲ್ಲಿ ಜನಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ 1940ರಲ್ಲಿ ಕಾಲವಾದರು.
- 1919 ರಲ್ಲಿ ಜನಿಸಿದ ಜಯಚಾಮರಾಜೇಂದ್ರ ಒಡೆಯರ್‌ಗೆ 1940 ರಲ್ಲಿ ಪಟ್ಟಾಭಿಷೇಕ ನಡೆಯಿತು. ಇವರು ರಾಜ್ಯಭಾರ ವಹಿಸಿಕೊಂಡ ಏಳು ವರ್ಷಕ್ಕೆ ಭಾರತ ಸ್ವಾತಂತ್ರ್ಯವಾಯಿತು.

# ರಾಜ್ಯಪಾಲರಾಗಿ ಸೇವೆ ಸಲ್ಲಿಕೆ

- ಅನಂತರ 1950 ರಲ್ಲಿ ಜಾರಿಗೆ ಬಂದ ರಾಜ್ಯಾಂಗ ರಚನೆಯ ಪ್ರಕಾರ ರಾಜತ್ವ ಕೊನೆಗೊಂಡು ಅಖಂಡ ಭಾರತದಲ್ಲಿ ಲೀನವಾಯಿತು.
- ನಂತರ 1950 ರಿಂದ 1956 ರವರೆಗೆ ಜಯಚಾಮರಾಜೇಂದ್ರ ಒಡೆಯರ್ ಮೈಸೂರಿನ ಗವರ್ನರ್ ಆಗಿ ಸೇವೆ ಸಲ್ಲಿಸಿ, 1974 ರಲ್ಲಿ ಕಾಲವಾದರು.
- ಅಲ್ಲಿಗೆ ಸುಮಾರು 550 ವರ್ಷಗಳ ಮೈಸೂರು ರಾಜರ ರಾಜ್ಯಭಾರವೂ ಕೊನೆಗೊಂಡಿತು.

# ಮೈಸೂರಲ್ಲಿ ಮುಂದುವರೆದ ರಾಜವಂಶ

- ಇಂದಿಗೂ  ಮೈಸೂರು ರಾಜವಂಶ ಮುಂದುವರೆದಿದ್ದು, ಜಯಚಾಮರಾಜೇಂದ್ರ ಅವರ ಪುತ್ರರಾಗಿ 1953ರಲ್ಲಿ ಜನಿಸಿದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು 2013ರಲ್ಲಿ ನಿಧನರಾದರು.
- ಆ ನಂತರ ರಾಜಮಾತೆ ಪ್ರಮೋದ ದೇವಿ ಅವರು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದತ್ತು ಪುತ್ರನಾಗಿ ಸ್ವೀಕರಿಸಿದ್ದಾರೆ.
- ಇದೀಗ ಯದುವೀರ ಮತ್ತು ತೃಷಿಕಾ ಕುಮಾರಿ ದಂಪತಿ 2017ರಲ್ಲಿ ಪುತ್ರ

ಆದ್ಯವೀರ ನರಸಿಂಹರಾಜರಿಗೆ ಜನ್ಮ ನೀಡಿದ್ದಾರೆ.